ದ್ವಿತೀಯ ಭಾಷೆ – ಕನ್ನಡ　　　ಪರ್ಯಾಯ ಶೈಕ್ಷಣಿಕ ಯೋಜನೆ 2021–22　　　7ನೇ ತರಗತಿ

ಫೆಬ್ರವರಿ ಮಾಹೆ

| ಕ್ರ.ಸಂ | ತಿಂಗಳುವಾರು | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|---|
| 01 | 1ನೇ ಮತ್ತು 2ನೇ ವಾರ | ಪಾಠ– 16 ಬಂಡೆದ್ದ ಮುಂಡರಗಿ ಭೀಮರಾಯ<br>ಡಾ. ನಿಂಗು ಸೊಲಗಿ | | |
| | | • ಕೃತಿಕಾರರ ಪರಿಚಯವನ್ನು ಮಾಡಿಸುವುದು. | • ಶಿಕ್ಷಕರು ಕೃತಿಕಾರರ ಪರಿಚಯ ಮಾಡಿಕೊಡುವರು. | • ಕೃತಿಕಾರರ ಕೃತಿಗಳನ್ನು ಹೇಳಿಸುವುದು. |
| | | • ದೇಶದ ಸ್ವತಂತ್ರಕ್ಕಾಗಿ ಹೋರಾಡಿದ ಮಹನೀಯರ ಬಗ್ಗೆ ತಿಳಿದುಕೊಳ್ಳುವುದು. | • ವಿದ್ಯಾರ್ಥಿಗಳಿಂದ ಆಯ್ದ ಸ್ವಾತಂತ್ರ್ಯ ಹೋರಾಟಗಾರರ ಸಾಧನೆಗಳ ಕುರಿತು ನಿಯೋಜಿತ ಕಾರ್ಯ ಮಾಡಿಸುವರು. | • ಸ್ವಾತಂತ್ರ್ಯ ಹೋರಾಟಗಾರರ ಸಾಧನೆಗಳನ್ನು ಹೇಳಿಸುವುದು. |
| | | • ಮುಂಡರಗಿ ಭೀಮರಾಯನ ಜೀವನವನ್ನು ಅರಿಯುವುದು. | • ಮುಂಡರಗಿ ಭೀಮರಾಯನ ಜೀವನದ ಸ್ವಾರಸ್ಯಕರ ವಿಚಾರಗಳನ್ನು ಹೇಳಿಸುವರು. | • ಪ್ರಶ್ನೆ ಕೇಳಿ ಉತ್ತರ ಪಡೆಯುವರು. |
| | | • ಬ್ರಿಟೀಷರ ವಿರುದ್ಧ ಶೌರಾವೇಶದಿಂದ ಹೋರಾಡಿದ ಬಗೆಗೆ ಅರಿಯುವುದು. | • ಯುದ್ಧದ ಸನ್ನಿವೇಶದಲ್ಲಿ ಹೋರಾಡಿದ ಬಗೆಗೆ ಚಿತ್ರಪಟದ ಮೂಲಕ ವರ್ಣಿಸುವರು. | • ಮುಂಡರಗಿ ಭೀಮರಾಯನ ಬಗೆಗೆ ವಿದ್ಯಾರ್ಥಿಗಳಿಗೆ ತಿಳಿದಿರುವ ವಿಚಾರ ಹೇಳಿಸುವುದು. |
| | | • ಮುಂಡರಗಿ ಭೀಮರಾಯ ಮತ್ತು ಅವನ ಸೈನ್ಯದ ಬಲದ ಬಗ್ಗೆ ತಿಳಿಸಿಕೊಡುವುದು. | • ಮುಂಡರಗಿ ಭೀಮರಾಯನ ಸೈನ್ಯದ ಇತರೆ ಸೈನಿಕರ ಬಗ್ಗೆ ವಿದ್ಯಾರ್ಥಿಗಳಿಂದ ಹೇಳಿಸುವುದು. | • ಅಭ್ಯಾಸ ಹಾಳೆ –1 |
| | | • ಮುಂಡರಗಿ ಭೀಮರಾಯನ ಹೋರಾಟದ ರೀತಿನೀತಿಗಳ ಬಗೆಗೆ ತಿಳಿಸುವುದು. | • ಯುದ್ಧದ ನೀತಿ ಮತ್ತು ಯುದ್ಧದ ನಿಪುಣತೆಯನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ವರ್ಣಿಸುವರು. | • ಮುಂಡರಗಿ ಭೀಮರಾಯನ ಸೈನ್ಯದ ಬಲವನ್ನು ಕುರಿತು ವಿದ್ಯಾರ್ಥಿಗಳು ಹೇಳುವರು. |
| | | • ಬ್ರಿಟೀಷರ ವಿರುದ್ಧ ಹೋರಾಡಿ ತನ್ನ ಜೀವ ಕಳೆದುಕೊಂಡ ಮಹನೀಯರ ಕುರಿತು | • ಸೈನ್ಯವು ಶತ್ರುಗಳ ವಿರುದ್ಧ ಹೋರಾಡಿದ ಘಟನೆಗಳನ್ನು ನಾಟಕ ಮಾಡುವ ಮೂಲಕ | • ಪ್ರಶ್ನೆಕೇಳಿ ಉತ್ತರ |

| | | | | |
|---|---|---|---|---|
| | | ತಿಳಿಸುವುದು.<br>• ಮುಂಡರಗಿ ಭೀಮರಾಯನು ಹೋರಾಡಿ ದೇಶಕ್ಕಾಗಿ ಪ್ರಾಣವನ್ನು ಸಮರ್ಪಿಸಿದ ಕ್ಷಣವನ್ನು ತಿಳಿಸುವುದು.<br>• ಹೊಸಪದಗಳ ಪರಿಚಯ ಮಾಡಿಕೊಡುವುದು.<br>• ವಾಕ್ಯರಚನಾ ಕೌಶಲ ಬೆಳೆಸುವುದು.<br>• ಮುಂಡರಗಿ ಭೀಮರಾಯನ ಜೀವನ ಮತ್ತು ಸಾಧನೆಯ ಸಾಕ್ಷ್ಯಚಿತ್ರ ರಚಿಸುವುದು.<br>• ವಿಶೇಷ ಪದಗಳಿಗೆ ಟಿಪ್ಪಣಿ ಬರೆಯುವ ಸಾಮರ್ಥ್ಯವನ್ನು ಬೆಳೆಸುವುದು. | ತಿಳಿಸಿಕೊಡುವರು.<br>• ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ ಜೀವನ ಮತ್ತು ಅವರು ಪ್ರಾಣವನ್ನು ಅರ್ಪಿಸಿರುವುದರ ಬಗ್ಗೆ ಕಥೆ ಹೇಳುವರು.<br>• ಮುಂಡರಗಿ ಭೀಮರಾಯನ ಯುದ್ಧದ ಸನ್ನಿವೇಶದಲ್ಲಿ ದೇಶಕ್ಕಾಗಿ ಪ್ರಾಣ ಸಮರ್ಪಿಸಿದ ಕ್ಷಣವನ್ನು ಭಾವಪೂರ್ಣವಾಗಿ ವರ್ಣಿಸುವರು.<br>• ಹೊಸಪದಗಳಿಗೆ ಅರ್ಥವನ್ನು ಹುಡುಕುವರು.<br>• ಸ್ವಂತವಾಕ್ಯ ರಚಿಸುವರು.<br>• ಸಾಕ್ಷ್ಯಚಿತ್ರವನ್ನು ರಚಿಸಲು ಮಾಹಿತಿ ಸಂಗ್ರಹಿಸಿ ಅಂತಿಮ ರೂಪಗೊಳಿಸುವರು.<br>• ವಿಶೇಷ ಪದಗಳನ್ನು ನೀಡಿ ಟಿಪ್ಪಣಿ ಬರೆಸುವರು. | ಪಡೆಯುವುದು.<br>• ಯುದ್ಧನೈಪುಣ್ಯತೆ ಮತ್ತು ತಂತ್ರವನ್ನು ಹೇಳಿಸುವರು.<br>• ಸ್ವಾತಂತ್ರ್ಯ ಹೋರಾಟದ ಬಗ್ಗೆ ಪ್ರಶ್ನೆ ಕೇಳಿ ಉತ್ತರ ಪಡೆಯುವುದು.<br>• ದೇಶಕ್ಕಾಗಿ ಹೋರಾಡಿದ ಮಹನೀಯರನ್ನು ಕುರಿತು ವಿದ್ಯಾರ್ಥಿಗಳಿಂದ ಭಾಷಣ ಮಾಡಿಸುವುದು.<br>• ಅಭ್ಯಾಸ ಹಾಳೆ –2<br>• ಹೊಸಪದಗಳನ್ನು ಹೇಳುವರು ನಾನಾರ್ಥಗಳನ್ನು ಗುರ್ತಿಸುವರು.<br>• ಸಾಕ್ಷ್ಯಚಿತ್ರದ ಬಗೆಗೆ ಮಾತನಾಡಿಸುವುದು.<br>• ಅಭ್ಯಾಸ ಹಾಳೆ –3<br>• ಟಿಪ್ಪಣಿಯನ್ನು ರಚಿಸುವರು. |
| ಮಾದರಿ ವಾಚನಕ್ಕಾಗಿ ಈ ಲಿಂಕ್ ಬಳಸಿ https://youtu.be/uMd4hIWjj0U<br>https://youtu.be/cPzTFHvMxrA | | | | |

| | | | | |
|---|---|---|---|---|
| **02** | **3ನೇ ಮತ್ತು 4ನೇ ವಾರ** | **ಪಾಠ– 17 ಸರ್ವಜ್ಞನ ವಚನಗಳು**<br>• ಸರ್ವಜ್ಞ ಕವಿಯ ಬಗ್ಗೆ ಪರಿಚಯಿಸುವುದು.<br>• ಕಾಲಜ್ಞಾನಿ ಸರ್ವಜ್ಞ ಕವಿಯ ಮಹತ್ವವನ್ನು ಅರಿಯುವುದು.<br>• ಸ್ವರಭಾರಕ್ಕನುಗುಣವಾಗಿ ವಚನಗಳನ್ನು ಶಿಕ್ಷಕರು ಹೇಳುವುದು.<br>• ತನ್ನೊಳಗಿರುವ ಹರನ ಮಹಿಮೆಯನ್ನು ಅರ್ಥೈಸುವುದು.<br>• ಬಂಧುಗಳು ಮತ್ತು ನೆಂಟರ ಮಹತ್ವದ ಬಗೆಗೆ ತಿಳಿಸುವುದು.<br>• ಗುರುವಿನ ಮಹತ್ವದ ಬಗೆಗೆ ತಿಳಿಸುವುದು.ಅವರು ಮುಂದಿನ ಸಾಧನೆಗೆ ತೋರುವ ದಾರಿಯ ಬಗೆಗೆ ಅರಿಯುವುದು.<br>• ಗುರುಗಳಿಗೆ ಮತ್ತು ಹಿರಿಯರಿಗೆ ಗೌರವಿಸುವುದನ್ನು ತಿಳಿಸುವುದು.<br>• ವಾಕ್ಯರಚನಾ ಕೌಶಲ ಬೆಳೆಸುವುದು.<br>• ಪದಗಳನ್ನು ಬಿಡಿಸಿ ಬರೆಯುವ ಸಾಮರ್ಥ್ಯ ಹೆಚ್ಚಿಸುವುದು.<br>• ಹೊಸಪದಗಳನ್ನು ಪರಿಚಯ ಮಾಡಿಕೊಡುವುದು.<br>• ವಿಭಕ್ತಿ ಪ್ರತ್ಯಯಗಳನ್ನು ಗುರುತಿಸುವ ಸಾಮರ್ಥ್ಯ ಬೆಳೆಸುವುದು. | • ಸರ್ವಜ್ಞನ ಜೀವನ ಕ್ರಮವನ್ನು ಅರಿಯುವರು.<br>• ಕಾಲಜ್ಞಾನಿ ಸರ್ವಜ್ಞನ ಸ್ವಾರಸ್ಯಕರ ಘಟನೆಗಳನ್ನು ಹೇಳುವರು.<br>• ಭಾವಪೂರ್ಣವಾಗಿ ವಿದ್ಯಾರ್ಥಿಗಳಿಂದ ಹಾಡಿಸುವುದು.<br>• ವಿದ್ಯಾರ್ಥಿಗಳು ದೇವರ ಬಗೆಗೆ ತಿಳಿದುಕೊಂಡು ಅವರ ಮಹಿಮೆಯನ್ನು ಹೇಳುವರು.<br>• ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ತಮ್ಮ ಬಂಧುಗಳ ಗುಣಾವಗುಣಗಳ ಬಗ್ಗೆ ಚರ್ಚಿಸುವರು.<br>• ವಿದ್ಯಾರ್ಥಿಗಳಿಂದ ತಾವು ಕಲಿತ ಶಾಲೆ ಮತ್ತು ಕಲಿಸಿದ ಗುರುವಿನ ಬಗೆಗೆ ಹೇಳುವರು.<br>• ಗುರುಗಳಿಗೆ ಹಿರಿಯರಿಗೆ ಗೌರವಿಸುವುದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವರು.<br>• ಸ್ವಂತ ವಾಕ್ಯವನ್ನು ರಚಿಸುವರು.<br>• ಬಿಡಿಸಿ ಬರೆಯುವುದನ್ನು ಕಲಿಯುವರು.<br>• ಹೊಸಪದಗಳಿಗೆ ಅರ್ಥ ನಾನಾರ್ಥಗಳನ್ನು ಹುಡುಕುವರು.<br>• ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಪಟ್ಟಿ ಮಾಡುವರು. | • ಸರ್ವಜ್ಞನ ವಚನಗಳನ್ನು ಪಟ್ಟಿ ಮಾಡಿಸುವುದು.<br>• ಸರ್ವಜ್ಞನು ಕನ್ನಡ ನಾಡಿನ ಶ್ರೇಷ್ಠ ಕವಿ ಎಂದು ಅರಿತು ಹೇಳುವರು.<br>• ರಾಗಬದ್ಧವಾಗಿ ಹಾಡುವರು.<br>• ಪ್ರಶ್ನೆ ಕೇಳಿ ಉತ್ತರ ಪಡೆಯುವರು.<br>• ವಿದ್ಯಾರ್ಥಿಗಳಿಂದ ತಮ್ಮ ನೆಂಟರು ಮತ್ತು ಬಂಧುಗಳ ಮಹತ್ವದ ಬಗ್ಗೆ ಹೇಳಿಸುವರು.<br>• ಅಭ್ಯಾಸ ಹಾಳೆ–4<br>• ಬರೆದಿರುವುದನ್ನು ಪರೀಕ್ಷಿಸುವರು.<br>• ಅಭ್ಯಾಸ ಹಾಳೆ–5<br>• ಹೊಸಪದಗಳನ್ನು ಹೇಳಿಸುವುದು.<br>• ವಿಭಕ್ತಿ ಪ್ರತ್ಯಯ ಕಲಿತು ಹೇಳುವರು |

## ಅಭ್ಯಾಸ ಹಾಳೆ–1

**7ನೇ ತರಗತಿ** **ಬಂಡೆದ್ದ ಮುಂಡರಗಿ ಭೀಮರಾಯ** **ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೆಯಿರಿ:**

1. ಭೀಮರಾಯ ಎಂತಹ ಯುದ್ಧದಲ್ಲಿ ಪರಿಣಿತನಾಗಿದ್ದನು ?

______________________________________________

2. ಭೀಮರಾಯನ ಹೋರಾಟದ ಗುರಿ ಏನಾಗಿತ್ತು ?

______________________________________________

3. ಕೊಪ್ಪಳದ ಕೋಟೆಯಲ್ಲಿ ಬ್ರಿಟೀಷರಿಗೆ ವಿಶ್ವಾಸಘಾತ ಮಾಡಿದವರಾರು ?

______________________________________________

4. ಬ್ರಿಟೀಷ್ ಅಧಿಕಾರಿ ಭೀಮರಾಯನಿಗೆ ಶರಣಾಗಲು ಯಾವ ಆಮಿಷ ಒಡ್ಡಿದನು ?

______________________________________________

5. ಭೀಮರಾಯನು ತನ್ನ ಸೇನಾನಿಗಳಿಗೆ ಮೆಚ್ಚುಗೆಯಿಂದ ಹೇಳಿದ ಮಾತುಗಳಾವುವು?

______________________________________________

______________________________________________

______________________________________________

6. ಬ್ರಿಟೀಷ್ ಅಧಿಕಾರಿ ಕೋಟೆಯನ್ನು ಮುತ್ತಿಗೆ ಹಾಕಿ ಭೀಮರಾಯನಿಗೆ ಏನೆಂದು ಎಚ್ಚರಿಕೆ ಕೊಟ್ಟನು ?

______________________________________________

______________________________________________

______________________________________________

7. ಭೀಮರಾಯನು ಸಾವಿನ ಸಂದರ್ಭದಲ್ಲಿ ಬ್ರಿಟಿಷರ ವಿರುದ್ಧ ಏನೆಂದು ಬಂಡಾಯ ಸಾರಿದನು ?

______________________________________________

______________________________________________

______________________________________________

**ಅಭ್ಯಾಸ ಹಾಳೆ–2**

**7ನೇ ತರಗತಿ** **ಬಂಡೆದ್ದ ಮುಂಡರಗಿ ಭೀಮರಾಯ** **ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಹೇಳಿಕೆಗಳನ್ನು ಯಾರು ಯಾರಿಗೆ ಹೇಳಿದ್ದಾರೆ ತಿಳಿಸಿರಿ.**

1. "ಅವನು ಗುಂಡೇಟಿನ ಗುರಿಕಾರ"

   ______________________________________________

2. "ದಾಸ್ಯದ ಅರಮನೆಗಿಂತ ಸ್ವತಂತ್ರದ ಸೆರೆಮನೆಯೇ ಲೇಸು"

   ______________________________________________

3. " ನಮ್ಮ ಸಂಗಾತಿಗಳನ್ನು ಕೊಂದ ನಿಮ್ಮನ್ನ ಸುಮ್ನೆ ಬಿಡೋದಿಲ್ಲ"

   ______________________________________________

**ಬಿಟ್ಟ ಸ್ಥಳಗಳನ್ನು ಸೂಕ್ತಪದಗಳಿಂದ ತುಂಬಿರಿ :**

1. ಸ್ವಾತಂತ್ರ್ಯ ಅನ್ನೋದು ______________ ಅಂತ ಬೇಡಿದರೆ ಸಿಗುವ ವಸ್ತು ಅಲ್ಲ.
2. ಗೆದ್ದರೆ ಸ್ವಾತಂತ್ರ್ಯ ಸತ್ತರೆ ____________
3. ದೀಪಬೆಳಗೋದು ಇತರರಿಗೆ ___________ ಎಂದು.

**ಈ ಕೆಳಗಿನ ಪದಗಳಿಗೆ ಹೊಂದಿಸಿ ಬರೆಯಿರಿ :**

1. ಕಣ್ಣಲ್ಲಿ ಎಣ್ಣೆ ಹಾಕಿಕೊಂಡು – ಬ್ರಿಟಿಷರ ಕಾಲದ ತೆರಿಗೆ ಅಧಿಕಾರಿ. _____________
2. ಕಣ್ಣು ಮುಚ್ಚಿ ಕುಳಿತಿರು. – ಜಾಗರೂಕತೆಯಿಂದಿರುವುದು _____________
3. ಕಲೆಕ್ಟರುಗಳು – ಮೈಮರೆತು ಇರುವುದು. _____________

**ಟಿಪ್ಪಣಿ ಬರೆಯಿರಿ:**

**ಗೆರಿಲ್ಲಾ ಯುದ್ಧ :**

______________________________________________

______________________________________________

______________________________________________

______________________________________________ .

**ಅಭ್ಯಾಸ ಹಾಳೆ–3**

**7ನೇ ತರಗತಿ** **ಬಂಡೆದ್ದ ಮುಂಡರಗಿ ಭೀಮರಾಯ** **ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಪದಗಳಿಗೆ ಅರ್ಥವನ್ನು ಬರೆಯಿರಿ:**

1. ಅನಾಹುತ = ______________________
2. ತಂತ್ರ = ______________________
3. ಬಗ್ಗುಬಡಿ = ______________________
4. ಬಂಡಾಯ = ______________________
5. ಹೊಂಚುಹಾಕು = ______________________.

**ಈ ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ:**

1. ಸುಲಭ X ____________________
2. ಪ್ರಾರಂಭ X ____________________
3. ಪರ X ____________________
4. ಸ್ವಾತಂತ್ರ್ಯ X ____________________
5. ಹಿಂದಕ್ಕೆ X ____________________

**ಈ ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ :**

**ಉದಾಹರಣೆ: ಕ್ವಾಟಿ – ಕೋಟೆ**

1. ಐತಿ – ____________________
2. ಬ್ಯಾಡ – ____________________
3. ಬರದಂಗ – ____________________
4. ಆದ್ವು – ____________________
5. ಆಗೈತಿ – ____________________

**ಈ ಕೆಳಗಿನ ಕ್ರಿಯಾಪದಗಳಿಗೆ ಧಾತು ಪದ ಬರೆಯಿರಿ:**

1. ಮಾಡುತ್ತಾನೆ – ________________
2. ಓಡುತ್ತದೆ – ________________
3. ಹೋದಳು – ________________
4. ತಿಂದನು – ________________

## ಅಭ್ಯಾಸ ಹಾಳೆ–4

**7ನೇ ತರಗತಿ** **ಸರ್ವಜ್ಞನ ವಚನಗಳು** **ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿ ಬರೆಯಿರಿ:**

1. ನಮ್ಮೊಳಗಿನ ಹರನನ್ನು ಯಾರು ತೋರುತ್ತಾನೆ ?

_______________________________________________

2. ತನ್ನನ್ನು ತಾನು ಅರಿಯುವುದು ಎಂದರೇನು ?

_______________________________________________

3. ಗುರುವಿಗಿಂತ ಬೇರೆ ಬಂಧುವಿಲ್ಲ ಏಕೆ ?

_______________________________________________

4. ಗುರುಹಿರಿಯರಿಗೆ ಹೇಗೆ ನಮಿಸಬೇಕು ?

_______________________________________________

5. ಸರ್ವಜ್ಞ ಕವಿಯ ಜನ್ಮಸ್ಥಳ ಯಾವುದು ?

_______________________________________________

6. ಜಗಕ್ಕೆ ಯಾರಿಂದ ಮುಕ್ತಿ ದೊರೆಯುವುದೆಂದು ಸರ್ವಜ್ಞಕವಿ ಹೇಳಿದ್ದಾನೆ ?

_______________________________________________

7. ಗುರುವಿನ ಮಹಿಮೆಯನ್ನು ಸರ್ವಜ್ಞಕವಿ ಏನೆಂದು ಬಣ್ಣಿಸಿದ್ದಾನೆ ?

_______________________________________________

_______________________________________________

_______________________________________________

_______________________________________________

**ಸ್ವಂತವಾಕ್ಯದಲ್ಲಿ ಬಳಸಿ ಬರೆಯಿರಿ :**

1. ಬಂಧು : _______________________________________
2. ಪುಣ್ಯ : _______________________________________
3. ಮುಕ್ತಿ : _______________________________________
4. ತಿಳಿವು : _______________________________________

## ಅಭ್ಯಾಸ ಹಾಳೆ–5

**7ನೇ ತರಗತಿ** **ಸರ್ವಜ್ಞನ ವಚನಗಳು** **ದ್ವಿತೀಯ ಭಾಷೆ ಕನ್ನಡ**

**ಈ ಕೆಳಗಿನ ಪದಗಳಿಗೆ ಅರ್ಥವನ್ನು ಬರೆಯಿರಿ :**

1. ಅಗ್ನಿ = ____________________
2. ಶಿರ = ____________________
3. ಸುರ = ____________________
4. ಜಗ = ____________________
5. ಕಳೆ = ____________________

**ಈ ಕೆಳಗಿನ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :**

1. ಬಂಧನ X ____________________
2. ಹಿರಿಯ X ____________________
3. ಪುಣ್ಯ X ____________________
4. ಜ್ಞಾನಿ X ____________________

**ಈ ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ ಬರೆಯಿರಿ.**

1. ಮರದೊಳಗೆ = ________________ + ____________________
2. ತಾನರಿಯ = ________________ + ____________________
3. ಬಂದುಂಡು = ________________ + ____________________
4. ಕಳೆಯಲರಿಯರು= ________________ + ____________________

**ಈ ಕೆಳಗಿನ ನಾಮಪ್ರಕೃತಿಗಳಾದ ನದಿ, ರವಿ, ಮನೆ ಇವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿ ಖಾಲಿ ಜಾಗದಲ್ಲಿ ಬರೆಯಿರಿ:**

| ವಿಭಕ್ತಿ | ಪ್ರತ್ಯಯ | ನದಿ | ರವಿ | ಮನೆ |
|---|---|---|---|---|
| ಪ್ರಥಮ | ಉ | ನದಿಯು | | |
| ದ್ವಿತೀಯ | ಅನ್ನು | | | |
| ತೃತೀಯ | ಇಂದ | | | |
| ಚತುರ್ಥಿ | ಗೆ,ಕೆ,ಇಗೆ,ಇಕೆ | | ರವಿಗೆ | |
| ಪಂಚಮಿ | ದೆಸೆಯಿಂದ | | | |
| ಷಷ್ಠಿ | ಅ | | | ಮನೆಯ |
| ಸಪ್ತಮಿ | ಅಲ್ಲಿ | | | |